ವನಪಾಲಕ

1 ಶ್ರೀ ಸಿದ್ಧಯ್ಯ

2 ಶ್ರೀ ಮರಿಶೆಟ್ಟಿ

3 ಶ್ರೀ ಸಿದ್ಧಪ್ಪ

ಅರಣ್ಯ ರಕ್ಷಕ

1 ಶ್ರೀ ಸಿದ್ಧಯ್ಯ ಪಿ

ಅರಣ್ಯ ವೀಕ್ಷಕ

1 ಶ್ರೀ ಮೊಹಮದ್

1325 (1643) ಶ್ರೀ ಆರ್ ಧ್ರುವನಾರಾಯಣ್ (ಸಂತೇಮರಳ್ಳಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆನೆಗಳ ಹಾವಳಿಯಿಂದ ರೈತರ ಬೆಳೆಗಳಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಆನೆಗಳ ಹಾವಳಿಯಿಂದ ರೈತರು ಬೆಳೆದ ಬೆಳೆಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಈ ಬಗ್ಗೆ ಸದನದಲ್ಲಿ ಪರಿಹಾರ ನೀಡುವ ಭರವಸೆ ನೀಡಿದ್ದು, ರೈತರಿಗೆ ಪರಿಹಾರದ ಹಣ ನೀಡಲಾಗಿದೆಯೇ (ವಿವರ ನೀಡುವುದು),

ಈ) ಹಾಗಿದ್ದಲ್ಲಿ, ಎಕರೆವಾರು ನೀಡಲಾಗಿರುವ ಪರಿಹಾರವೆಷ್ಟು,

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಹ್ಞೌದು

ಇ) 2006–07ನೇ ಸಾಲಿನಲ್ಲಿ ವನ್ಯಪ್ರಾಣಿಗಳಿಂದಾಗುವ ಹಾನಿಗೆ ಪರಿಹಾರ ನೀಡಲು ರೂ 148 51 ಲಕ್ಷ ಬಿಡುಗಡೆಯಾಗಿದ್ದು, ಅದನ್ನು ಆದ್ಯತೆ ಮೇರೆಗೆ ರಾಜ್ಯದ ಎಲ್ಲಾ ಘಟನಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಈ ಹಣ ಪೂರ್ತಿ ನೀಡಲಾಗಿದೆ ಈ ಪೈಕಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರಿಹಾರ ಧನ ನೀಡಿರುವ ಮೊತ್ತ ರೂ 32,61,275–00

ಈ) ಸರ್ಕಾರಿ ಆದೇಶ ಸಂ ಅಪಜೀ 52 ಎಫ್‌ಡಬ್ಲ್ಯೂಎಲ್ 96, ದಿನಾಂಕ 12–12–2002 ರಲ್ಲಿನ ಆದೇಶದಲ್ಲಿ ತಿಳಿಸಿರುವ ಈ ಕೆಳಕಂಡ ಮಾನದಂಡದಂತೆ ಪರಿಹಾರವನ್ನು ಪಾವತಿಸಲಾಗಿದೆ

1	ಭತ್ತ	ರೂ 250/–	ಪ್ರತಿ ಕ್ವಿಂಗೆ
2	ರಾಗಿ	ರೂ 150/–	ಪ್ರತಿ ಕ್ವಿಂಗೆ
3	ಜೋಳ	ರೂ 200/–	ಪ್ರತಿ ಕ್ವಿಂಗೆ
4	ಕಬ್ಬು	ರೂ 400/–	ಪ್ರತಿ ಟನ್‌ಗೆ
5	ಹತ್ತಿ	ರೂ 400/–	ಪ್ರತಿ ಕ್ವಿಂಗೆ
6	ಬಾಳೆ	ರೂ 20/–	ಪ್ರತಿ ಗಿಡಕ್ಕೆ
7	ತೆಂಗು 10 ವರ್ಷ ಮೇಲ್ಪಟ್ಟು	ರೂ 250/–	ಪ್ರತಿ ಮರಕ್ಕೆ

ಪರಿಹಾರವನ್ನು ಕೃಷಿ ಭೂಮಿಯಲ್ಲಿ ಆಗಿರುವ ಬೆಳೆನಷ್ಟ ಅಂದಾಜು ಮಾಡಿ ನೀಡುವುದಾಗಿದ್ದು, ಹೊಲದ ಎಕರೆ ವಿಸ್ತೀರ್ಣವನ್ನು ಪರಿಗಣಿಸಿ ಅಲ್ಲ ಪರಿಹಾರವನ್ನು ಕೃಷಿ ಭೂಮಿಯಲ್ಲಿ ಆಗಿರುವ ಬೆಳೆನಷ್ಟ ಅಂದಾಜು ಮಾಡಿ ನೀಡುವುದಾಗಿದ್ದು, ಹೊಲದ ಎಕರೆ ವಿಸ್ತೀರ್ಣವನ್ನು ಪರಿಗಣಿಸಿ ಅಲ್ಲ

ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪರಿಹಾರ ಧನ ನೀಡಿದ ವಿವರಗಳು ಈ ಕೆಳಗಿನಂತಿವೆ

ವಿಭಾಗ	ಪ್ರಕರಣ ಸಂಖ್ಯೆ	ಪಾವತಿಸಿದ ಮೊತ್ತ (ರೂ)
ಹುಣಸೂರು ವನ್ಯಜೀವಿ ವಿಭಾಗ	296	2,34,193 00
ಬಂಡೀಪುರ ಹುಲಿಯೋಜನೆ ವಿಭಾಗ	1125	9,20,550 00
ಮೈಸೂರು ಪ್ರಾದೇಶಿಕ ವಿಭಾಗ	381	5,13,805 00
ಹುಣಸೂರು ಪ್ರಾದೇಶಿಕ ವಿಭಾಗ	166	2,30,675 00
ಕೊಳ್ಳೇಗಾಲ ವಿಭಾಗ	1442	12,31,752 00
ಚಾಮರಾಜನಗರ ವಿಭಾಗ	53	97,000 00
ಕಾವೇರಿ ವನ್ಯಜೀವಿ ವಿಭಾಗ ಕನಕಪುರ	33	33,300 00

ಊ) ಕಾಡಾನೆಗಳಿಂದ ಹಾನಿಗೊಳಗಾದ ಬೆಳೆಗಳಿಗೆ, ಪ್ರಾಣಹಾನಿ, ಶಾಶ್ವತ ಅಂಗವಿಕಲತೆ ಸಂಭವಿಸಿದಾಗ ಪರಿಹಾರ ನೀಡುವ ಬಗ್ಗೆ ಸರ್ಕಾರದ ಆದೇಶ ದಿನಾಂಕ 12–12–2002 ರಲ್ಲಿ ಪರಿಹಾರ ಮೊತ್ತವನ್ನು ನಿಗದಿಪಡಿಸಲಾಗಿತ್ತು ಈ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿನ ಪರಿಹಾರವನ್ನು ನೀಡಲು ದಿನಾಂಕ 17–01–2007 ರಂದು ಆದೇಶಿಸಲಾಗಿದೆ ಜೀವಹಾನಿಗೆ ಮೊದಲು ಒಂದು ಲಕ್ಷ ರೂ ಪರಿಹಾರ ನೀಡುತ್ತಿದ್ದು, ಈಗ ರೂ 1 50 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಬೆಳೆಹಾನಿ ಪರಿಹಾರ ಮತ್ತು ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಶೇಕಡ 30ರ ಮೇಲೆ ಹೆಚ್ಚಳ ನೀಡಲಾಗಿದೆ ಇದರಿಂದ ತೊಂದರೆಗೊಳಗಾದ ರೈತರ ಮತ್ತು ಇತರರಿಗೆ ಸೂಕ್ತ ಪರಿಹಾರ ಒದಗಿಸಿದಂತಾಗುತ್ತದೆ

1326 (1644) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಹಾಗೂ ಗುರುತಿಸಲಾದ ಕನಿಷ್ಠ 3800 ಹಿಂಬಾಕಿ ಹುದ್ದೆಗಳಿರುವುದು ನಿಜವಲ್ಲವೇ,

ಆ) ಬ್ಯಾಕ್‌ಲಾಗ್ ಭರ್ತಿಯ ನೇತೃತ್ವ ವಹಿಸಲು ಸಚಿವ ಸಂಪುಟದ ಉಪಸಮಿತಿಯು ಅಸ್ತಿತ್ವದಲ್ಲಿದೆಯೇ,